196 (573) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ)

ಮಾನ್ಯ ಆಹಾರ ಮತ್ತು ನಾಗರಿಕ ಸರವರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಮಡಿಕೇರಿ ವಿಧಾನಸಭಾ ಕ್ಷೇತ್ರವ್ಯಾಪ್ತಿ ಯಲ್ಲಿ ಈವರೆಗೂ ಕ್ರಮವಾಗಿ ಎಷ್ಟು ಜನರಿಗೆ ಬಿಪಿಎಲ್ ಮತ್ತು ಎಪಿಎಲ್ ಕಾರ್ಡುಗಳನ್ನು ವಿತರಿಸಲಾಗಿದೆ ವಿತರಿಸಲು ಬಾಕಿ ಇರುವುದೆಷ್ಟು ; (ಕ್ಷೇತ್ರದ ಪಂಚಾಯ್ತಿವಾರು ವಿವರ ನೀಡುವುದು);

ಆ) ಈಗಾಗಲೇ ವಿತರಿಸಿದ ಕಾರ್ಡುಗಳಲ್ಲಿ ಅನಿಲ ಗ್ಯಾಸ್ ಇಲ್ಲದವರಿಗೂ ಅನಲ ಗ್ಯಾಸ್ ಎಂದು ತಪ್ಪಾಗಿ ನಮೂದಾಗಿ ವಿತರಿಸಿರುವುದು ನಿಜವೇ;

ಇ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಈಗಾಗಲೇ ಎಷ್ಟು ಕಾರ್ಡುಗಳನ್ನು ಸರಿಪಡಿಸಲಾಗಿದೆ; (ವಿವರ ಒದಗಿಸುವುದು)

ಈ) ಅದೇ ರೀತಿ ಜಿಲ್ಲೆಯ ತೀವ್ರ ಮಳೆಪೀಡಿತ ಪ್ರದೇಶವಾಗಿದ್ದು ಗುಡ್ಡ ಗಾಡು ಪ್ರದೇಶ ದಲ್ಲಿ ವಿದ್ಯುತ್ ಸಂಪರ್ಕವಿಲ್ಲದೇ ಇರುವುದರಿಂದ ಇದನ್ನು ಪರಿಗಣಿಸಿ ಎಲ್ಲರಿಗೂ ಕನಿಷ್ಠ 3 ಲೀಟರ್ ಸೀಮೆ ಎಣ್ಣೆಯನ್ನು ವಿತರಿಸುವ ಯೋಜನೆ ಸರ್ಕಾರದ ಮುಂದಿದೆಯೇ ಈ ಕುರಿತು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು);

ಉ) ಈ ಮೊದಲು ಇದ್ದ ಕಾರ್ಡ್ ಒಂದಕ್ಕೆ 20 ಕೆಜಿ ಎಂಬುದರ ಬದಲು ಯೂನಿಟ್ ಬಳಿಕ ಆಧಾರದಲ್ಲಿ ಪ್ರತಿ ವ್ಯಕ್ತಿಗೆ 4 ಕೆಜಿ ಪ್ರಮಾಣಕ್ಕೆ ಬದಲಾಯಿಸಲು ಕಾರಣವೇನು, ಇದರ ಸಾಧಕ ಬಾಧಕಗಳೇನು ತಿಳಿಸುವುದು?

ಶ್ರೀ ಗೋವಿಂದ ಎಂ. ಕಾರ್ಜೋಳ

ಅ) ಮಡಿಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಈವರೆವಿಗೂ 26,355 ಬಿಪಿಎಲ್, 20687 ಎಪಿಎಲ್ ಕಾರ್ಡುಗಳನ್ನು ವಿತರಿಸಲಾಗಿದೆ ಕ್ಷೇತ್ರವಾರು ಕ್ಷೇತ್ರವಾರು ವಿವರದ ಪಟ್ಟಿಯನ್ನು ಲಗತ್ತಿಸಿದೆ.

ಆ) ಕೆಲವು ತಪ್ಪುಗಳು ಆಗಿರುವುದು ನಿಜವಿರುತ್ತದೆ. ಇವುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಇ) ಈ ಸಂಬಂಧ ಸಾರ್ವಜನಿಕ ಅಹವಾಲುಗಳ ಕೇಂದ್ರವನ್ನು ತೆರೆದು ಅಹವಾಲುಗಳನ್ನು ಸ್ವೀಕರಿಸಿ ನೊಂದಾಯಿಸಿ ಸಮೀಕ್ಷಾ ತಂಡದಿಂದ ಪುನರ್ ಪರಿಶೀಲನೆ ನಡೆಸಿ ಅದನ್ನು ಫಲಾನುಭವಿಗಳನ್ನು ಪುನಃ ಗುರುತಿಸಿ ಅಂತಹ ಕಾರ್ಡುಗಳನ್ನು ಸರಿಪಡಿಸಿ ಈಗಾಗಲೇ ಸಂಬಂಧಪಟ್ಟ ಫಲಾನುಭವಿಗಳಿಗೆ ವಿತರಿಸಲಾಗಿರುತ್ತದೆ. ಮಡಿಕೇರಿ ವಿಧಾನ ಸಬಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪುನರ್ ಪರಿಶೀಲನೆ ನಂತರ ಒಟ್ಟು 3529 ಅನಲ ಪಡಿತರ ಚೀಟಿಗಳನ್ನು ಅನಿಲ ರಹಿತ ಪಡಿತರ ಚೀಟಿಗಳೆಂದು ಗುರುತಿಸಿ ಸರಿಪಡಿಸಲಾಗಿದೆ.

ಈ) ಗ್ರಾಮಂತರ ಪ್ರದೇಶದ ಅನಿಲರಹಿತ ಎಲ್ಲಾ ಕುಟುಂಬಗಳಿಗೂ 4 ಲೀಟರ್ ನಂತ ಹಾಗೂ ಪಟ್ಟಣ ಪ್ರದೇಶದ ಅನಿಲರಹಿತ ಕುಟುಂಬಗಳಿಗೆ 6 ಲೀಟರಂತೆ ಸೀಮೆಎಣ್ಣೆ ವಿತ ರಿಸಲಾಗುತ್ತಿದೆ.

ಉ) ಈ ಮೊದಲು ಇಡಿಗಂಟಾಗಿ ಆಹಾರಧಾನ್ಯಗಳನ್ನು ನೀಡುವ ಪದ್ಧತಿಯಲ್ಲಿ ಸದಸ್ಯರ ಸಂಖ್ಯೆಯನ್ನು ಪರಿಗಣಿಸದೇ ಒಬ್ಬ ಅಥವಾ ಇಬ್ಬರು ಸದಸ್ಯರಿರುವ ಕುಟುಂಬಗಳಿಗೂ ಹಾಗೂ ಹೆಚ್ಚಿನ ಸಂಖ್ಯೆಯ ಸದಸ್ಯರಿರುವ ಕುಟುಂಬಗಳಿಗೂ ಒಂದೇ ಪ್ರಮಾಣದ ಅಂದರೆ, 20 ಕೆ.ಜಿ ಅಕ್ಕಿ ಹಾಗೂ 5 ಕೆ,ಜಿ ಗೋಧಿಯನ್ನು ವಿತರಿಸಲಾಗುತ್ತಿತ್ತು. ಇದರಿಂದಾಗಿ ಸದಸ್ಯರು ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಆಹಾರ ಧಾನ್ಯಗಳನ್ನು ವಿತರಿಸುವ ಯೂನಿಟ್ ಪದ್ಧತಿಯನ್ನು ಆರಂಭಿಸಲಾಗಿರುತ್ತದೆ. ಈ ಪದ್ಧತಿಯಲ್ಲಿ ಪ್ರತೀ ಸದಸ್ಯರಿಗೆ ಸಹಾಯಧನಯುಕ್ತ 4 ಕೆ,ಜಿ ಅಕ್ಕಿ ಜೊತೆಗೆ 1 ಕೆ,ಜಿ ಗೋದಿಯನ್ನು ವಿತರಿಸಲಾಗುತ್ತಿದೆ.

ಅನುಬಂಧ

ಮಡಿಕೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿರಾಜಪೇಟೆ ತಾಲ್ಲೂಕಿನಲ್ಲಿರುವ ಗ್ರಾಮ ಪಂಚಾಯ್ತಿವಾರು ಮತ್ತು ವಿತರಿಸಬೇಕಾಗಿರುವ ಪಡಿತರ ಚೀಟಿಗಳ ವಿವರ

ಕ್ರ.ಸಂ.	ಗ್ರಾಮ ಪಂಚಾಯ್ತಿಯ ಹೆಸರು	ವಿತರಿಸಲಾಗಿರುವ ಪಡಿತರ ಚೀಟಿಗಳು	
		ಬಿಪಿಎಲ್	ಎಪಿಎಲ್
1	ಹೊಸೂರು	761	185
2	ಪಾಲಿಬೆಟ್ಟ	926	344
3	ಬಿಳುಗುಂದ	768	205
4	ಸಿದ್ದಾಪುರ	1699	663
5	ಹಾಲುಗುಂದ	475	289
6	ಕಣ್ಣಂಗಾಲು	786	220
7	ಅಮ್ಮತ್ತಿ	908	238
8	ಕಾರ್ಮಾಡು	1000	477
9	ಮಾಲ್ದಾರೆ	1955	232
10	ಚೆನ್ನಯ್ಯನಕೋಟೆ	1646	615
	ಒಟ್ಟು	10924	3168
ಮಡಿಕೇರಿ ವಿಧಾನಸಬಾ ಕ್ಷೇತ್ರದ ಒಟ್ಟು		**26355**	**20687**